# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ</u>

ಎಸ್.ಸಿ. ನಂ. 57/2022

ಪಿಡಬ್ಲ್ಯೂ: 14
ಸಿಡಬ್ಲ್ಯೂ: 04

**<u>ದಿನಾಂಕಃ 11-06-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

| | |
|---|---|
| ಸಾಕ್ಷಿದಾರರ ಹೆಸರು | : ಪ್ರದೀಪ್ ಹೆಚ್.ಎಸ್ |
| ತಂದೆಯ ಹೆಸರು | : ಲೇಟ್ ಸಣ್ಣಹನುಮಂತಪ್ಪ ಹೆಚ್. |
| ವಯಸ್ಸು | : 36 ವರ್ಷ |
| ಉದ್ಯೋಗ | : ಗ್ರಾಮ ಲೆಕ್ಕಾಧಿಕಾರಿ, ಚಿಕ್ಕಬೆನ್ನೂರು ವೃತ್ತ |
| ವಾಸ ಸ್ಥಳ | : ಚಿತ್ರದುರ್ಗ |

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ</u>**

**2016** ರಿಂದ ನಾನು ಚಿಕ್ಕಬೆನ್ನೂರು ಸರ್ಕಲ್ ನಲ್ಲಿ ಗ್ರಾಮ ಲೆಕ್ಕಾಧಿಕಾರಿ ಎಂದು ಸೇವೆ ಸಲಿಲಸುತ್ತಿದ್ದೇನೆ. ದಿನಾಂಕ **09–01–2022** ರಂದು ನಮ್ಮ ಉಪ ತಹಶೀಲ್ದಾರ್ ರವರು ನನಗೆ ಮೌಖಿಕವಾಗಿ ಆದೇಶ ಮಾಡಿ ಭರಮಸಾಗರ ಪೊಲೀಸ್ ಠಾಣೆಗೆ ಹೋಗುವಂತೆ ತಿಳಿಸಿದರು. ಅದರಂತೆ ನಾನು ಮುಂಜಾನೆ **10.00** ಗಂಟೆ ಸುಮಾರಿಗೆ ಠಾಣೆಗೆ ಹೋದೆ. ಅಲ್ಲಿ ಡಿವೈ.ಎಸ್.ಪಿ.ರವರು ನನಗೆ ನೋಟಿಸ್ ಜಾರಿ ಮಾಡಿ ಪಂಚನಾಮೆಗೆ ಬರಬೇಕು ಎಂದು ತಿಳಿಸಿದರು. ನನಗೆ ಜಾರಿ ಮಾಡಲಾದಂತಹ ನೋಟಿಸುಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ–**16** ಮತ್ತು **17** ಎಂದು ಗುರುತಿಸಲಾಯಿತು. ಅಲ್ಲದೇ ಠಾಣೆಯಲ್ಲಿ ಇದ್ದಂತಹ ಆರೋಪಿಯನ್ನು ತೋರಿಸಿ ಪೊಲೀಸರು ಆತ ತನ್ನ ಹೆಂಡತಿಯನ್ನು ಕೊಲೆ ಮಾಡಿದ್ದಾನೆ ಎಂದು ತಿಳಿಸಿದರು. ಕಾರಣ ಪಂಚನಾಮೆಗೆ ನಾನು ಬರಬೇಕೆಂದು ತಿಳಿಸಿ ಆರೋಪಿ ಕೃತ್ಯಕ್ಕೆ ಬಳಸಿದ ಆಯುಧವನ್ನು ಹಾಜರುಪಡಿಸುವುದಾಗಿ ಹೇಳಿದ್ದರ ಮೇರೆಗೆ ನಾವು ಆರೋಪಿ ಕರೆದುಕೊಂಡು ಹೋದಂತೆ ಆತನ ಮನೆಗೆ ಹೋದೆವು. ಆ ಮನೆಗೆ ಬೀಗ ಹಾಕಲಾಗಿತ್ತು. ಪಕ್ಕದ ಮನೆಯಿಂದ ಬೀಗದ ಕೀಯನ್ನು ತೆಗೆದುಕೊಂಡು ಬೀಗವನ್ನು ತೆಗೆದು ಮನೆಯ ಒಳಗೆ ಹೋದಾಗ ಮನೆಯಲ್ಲಿ ಅಡಿಕೆ ದಬ್ಬೆಯಿಂದ ಮಾಡಿದ ಒಂದು ಸಣ್ಣ ಅಟ್ಟ ಇತ್ತು. ಅದಕ್ಕೆ ಏಣಿಯನ್ನು ಹಾಕಿಕೊಂಡು ಅಟ್ಟದ ಮೇಲೆ ಇದ್ದಂತಹ ಒಂದು ಒನಕೆ ಹಾಗೂ ಒಂದು ಹಾರೆಯನ್ನು ಆರೋಪಿ ತೆಗೆದು ಕೊಟ್ಟ. ತನ್ನ ಹೆಂಡತಿಗೆ ಆ ಒನಕೆಯಿಂದಲೇ ತಾನು ಹೊಡೆದಿದ್ದಾಗಿ ನಮ್ಮ ಮುಂದೆ ಹೇಳಿದ. ಆ ಹಾರೆಯಿಂದ ಮನೆ ಒಳಗೆ ಗುಂಡಿ ತೆಗೆದು ನಂತರ ಹೆಣವನ್ನು ಹೂತುಹಾಕಿ ಕಡಪ ಕಲ್ಲು ಮುಚ್ಚಿದ್ದಾಗಿ ಹೇಳಿದ. ಸದರಿ ಒನಕೆ ಹಾಗೂ ಹಾರೆ ಇವುಗಳನ್ನು ಪೊಲೀಸರು ಚೀಲದಲ್ಲಿ ಹಾಕಿ ಅಮಾನತ್ತುಪಡಿಸಿಕೊಂಡರು. ಆಗ ಮಾಡಲಾದ ಮಹಜರನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದ್ದು ಅದನ್ನು ಮುಂಜಾನೆ **11.30** ರಿಂದ **12.15** ಅವಧಿಯಲ್ಲಿ ಮಾಡಲಾಯಿತು. ಸದರಿ ಮಹಜರನ್ನು ನಿಪಿ–**18** ಎಂದು**,** ನನ್ನ ಸಹಿಯನ್ನು ನಿಪಿ–**18**(ಎ) ಎಂದು ಗುರುತಿಸಲಾಯಿತು. ಅಲ್ಲದೆ ಆ ಕಾಲಕ್ಕೆ ಪೊಟೋಗಳನ್ನು ಕೂಡಾ

ತೆಗೆಯಲಾಯಿತು ಹಾಗೂ ನಕ್ಷೆಯನ್ನು ತಯಾರಿಸಲಾಯಿತು. ಆಗ ತೆಗೆಯಲಾದ **4** ಪೊಟೋಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ–**19** ರಿಂದ **22** ಎಂದು ಗುರುತಿಸಲಾಯಿತು. ಆ ದಿನ ಅಮಾನತ್ತುಪಡಿಸಿಕೊಳ್ಳಲಾದಂತಹ ಒನಕೆ ಹಾಗೂ ಹಾರೆ ಕೋಲುಗಳನ್ನು ನೋಡುತ್ತಿದ್ದು ಅವುಗಳನ್ನು ಮುದ್ದೆ ಮಾಲು **18** ಮತ್ತು **19** ಅನುಕ್ರಮವಾಗಿ ಎಂದು ಗುರುತಿಸಲಾಯಿತು.

**2.** ನಂತರ ಆರೋಪಿ ಮನೆಯ ಹಾಲಿನಲ್ಲಿ ಶವವನ್ನು ಹೂತುಹಾಕಿದ್ದ ಸ್ಥಳವನ್ನು ತೋರಿಸಿದ. ಪೊಲೀಸರು ಆ ಸ್ಥಳದ ಪೊಟೋವನ್ನು ಕೂಡಾ ತೆಗೆದುಕೊಂಡರು. ಹಾಗೂ ಅದರ ನಕ್ಷೆಯನ್ನು ತಯಾರಿಸಿದರು. ಮದ್ಯಾಹ್ನ **12.20** ರಿಂದ **1.00** ಗಂಟೆ ಸಮಯದಲ್ಲಿ ಮಹಜರ್ ಕ್ರಮ ಜರುಗಿಸಿದರು. ಸದರಿ ಮಹಜರನ್ನು ನೋಡುತ್ತಿದ್ದು ನಿಪಿ–**23** ಎಂದು**,** ನನ್ನ ಸಹಿಯನ್ನು ನಿಪಿ–**23**(ಎ) ಎಂದು ಗುರುತಿಸಲಾಯಿತು. ಆಗ ತೆಗೆಯಲಾದ ಪೊಟೋಗಳನ್ನು ನಿಪಿ–**24** ಹಾಗೂ **25** ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಶ್ರೀಮತಿ ಎಂ.ಬಿ. ವಕೀಲರಿಂದ ಆರೋಪಿತನ ಪರವಾಗಿಃ**

**3.** ಭರಮಸಾಗರ ಪೊಲೀಸ್ ಠಾಣೆಯಿಂದ ಆ ಸ್ಥಳ ಸುಮಾರು **20** ಕಿಮೀ ದೂರದಲ್ಲಿ ಬರುತ್ತದೆ. ನಾನು ಠಾಣೆಗೆ ಹೋದಾಗ ಸತ್ತವಳ ತಂದೆ ಠಾಣೆಯಲ್ಲಾಗಲೀ ಅಥವಾ ಅಲ್ಲಿಂದ ನಾವು ಆರೋಪಿತನ ಮನೆಗೆ ಹೋದಾಗ ಆತನ ಮನೆಯಲ್ಲಾಗಲೀ ಅವರು ಇರಲಿಲ್ಲ. ಮೃತಳ ತಂದೆ ಅಥವಾ ತಾಯಿ ಯಾರೆಂದು ನನಗೆ ಗೊತ್ತಿರಲಿಲ್ಲ. ಆ ಮನೆಗೆ ಹೋದಾಗ ನಮ್ಮನ್ನು ಹಾಗೂ ಪೊಲೀಸರನ್ನು ಹೊರತುಪಡಿಸಿ ಸುಮಾರು **10–15** ಜನ ಅಲ್ಲಿ ಸೇರಿದ್ದರು. ಪೊಲೀಸರ ಪೈಕಿ ಡಿವೈ.ಎಸ್.ಪಿ. ಇದ್ದರು ಹಾಗೂ ಅವರ ಸಿಬ್ಬಂದಿಗಳು ಇದ್ದರು ಆದರೆ ಆ ಸಿಬ್ಬಂದಿಗಳು ಎಷ್ಟು ಇದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ಆರೋಪಿ**,** ಪೊಲೀಸರು ಹಾಗೂ ನಾನು ಜೀಪಿನಲ್ಲಿ ಆರೋಪಿತನ ಮನೆಗೆ ಹೋದೆವು. ಅಲ್ಲಿ ಸೇರಿದ್ದ ಜನರಲ್ಲಿ ಮೃತಳ ತಂದೆ ಇದ್ದರೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಬೀಗದ ಕೀಯನ್ನು ಪಡೆದುಕೊಂಡು ಬಂದಂತಹ ಮನೆ ಬಹುಶಃ ನಾರಪ್ಪ ಬಿನ್ ನಾರಪ್ಪ ಎಂಬುವರಿಗೆ ಸೇರಿರಬಹುದು. ಆದರೆ ಸದರಿ ನಾರಪ್ಪ ಮಹಜರ್ ಕಾಲಕ್ಕೆ ಬಂದಿದ್ದರೋ ಅಥವಾ ಇಲ್ಲವೋ ಎಂದು ನಾನು ಗಮನಿಸಲಿಲ್ಲ. ಅವರು ಕೀ ಕೊಟ್ಟ ಬಗ್ಗೆ ಪೊಟೋಗಳನ್ನು ತೆಗೆಯಲಾಗಿಲ್ಲ.

**4.** ಅಟ್ಟವು ಆ ಮನೆಯ ಹಾಲಿನಲ್ಲೇ ಬರುತ್ತದೆ. ಅದೇ ಹಾಲಿನಲ್ಲಿ ಮಂಚ ಇತ್ತು ಮತ್ತು ಆ ಹಾಲಿನಲ್ಲಿ ಶವವನ್ನು ಹೂತುಹಾಕಲಾಗಿತ್ತು. ಅಟ್ಟ ಓಪನ್ ಇರುವಂತಹ ಸ್ಥಳ ಇತ್ತು ಎನ್ನುವುದು ನಿಜ. ಒನಕೆ ಹಾಗೂ ಹಾರೆ ಇವುಗಳನ್ನು ಪ್ರತ್ಯೇಕವಾದ ಚೀಲಗಳಲ್ಲಿ ಹಾಕಿ

ಪೊಲೀಸರು ಆ ಚೀಲಗಳನ್ನು ಕಟ್ಟಿ ಸೀಲು ಮಾಡಿದರು. ಆದರೆ ಆ ಕಟ್ಟಿದ ಸೀಲು ಮಾಡಲಾದಂತಹ ಚೀಲಗಳಿಗೆ ನಮ್ಮ ಸಹಿ ಪಡೆದು ಚೀಟಿಗಳನ್ನು ಅಂಟಿಸಲಿಲ್ಲ. ಆ ಸ್ಥಳದಲ್ಲಿ ಕಡಪ ಕಲ್ಲುಗಳನ್ನು ಹೊಸದಾಗಿ ಜೊಡಿಸಲಾದಂತೆ ಕಂಡುಬರುತ್ತಿತ್ತು. ಅಲ್ಲಿದ್ದಂತಹ ಹಳೆಯ ಕಡಪ ಕಲ್ಲಿಗೂ ಹೊಸದಾಗಿ ಜೊಡಿಸಲಾದಂತಹ ಕಲ್ಲಿಗೂ ವ್ಯತ್ಯಾಸ ಕಂಡುಬರುತ್ತಿತ್ತು. ಹೊಸದಾಗಿ ಜೊಡಿಸಿದಂತಹ ಕಲ್ಲು ಸ್ವಲ್ಪ ಮೇಲೆ ಬಂದಿತ್ತು. ಆ ಸಮಯದಲ್ಲಿ ಪೊಲೀಸರು ಆ ಕಲ್ಲುಗಳನ್ನು ಎತ್ತಿ ನೋಡಲಿಲ್ಲ. ಆ ಕಾಲಕ್ಕೆ ಅಲ್ಲಿ ಇರುವಂತಹ ಬಟ್ಟೆಗಳನ್ನು ಪೊಲೀಸರು ಅಮಾನತ್ತುಪಡಿಸಿಕೊಂಡಿಲ್ಲ. ಆ ಮಹಜರ್ ಗಳನ್ನು ಮುಖ್ಯ ಪೇದೆಯವರು ಬರೆದಿರಬಹುದು. ಮಹಜರ್ ಗಳನ್ನು ಬರೆದಂತಹ ಮುಖ್ಯ ಪೇದೆಯದ್ದಾಗಲೀ ಅಥವಾ ಪೊಟೋ ತೆಗೆದಂತಹ ವ್ಯಕ್ತಿಯದ್ದಾಗಲೀ ಸಹಿಗಳನ್ನು ಆಗ ಮಹಜರ್ ಗಳ ಮೇಲೆ ಪಡೆಯಲಾಗಿಲ್ಲ. ಕ್ಯಾಮೆರಾದಲ್ಲಿ ಪೊಟೋಗಳನ್ನು ತೆಗೆಯಲಾಯಿತು. ನಿಪಿ–**24** ಹಾಗೂ **25** ರಲ್ಲಿರುವಂತಹ ಮಹಿಳೆ ಜಿ. ಸುನಂದಮ್ಮ ಎಂಬ ನಮ್ಮ ಸಹೋದ್ಯೋಗಿ ಇದ್ದು ಅವರು ಕೂಡಾ ಗ್ರಾಮ ಲೆಕ್ಕಾಧಿಕಾರಿ ಇರುತ್ತಾರೆ. ಆಗ ಪೊಲೀಸರು ನನ್ನ ಸಮಕ್ಷಮ ಆ ಮನೆಯಲ್ಲಿ ಬೇರೆ ಏನೂ ಹುಡುಕಾಡಿಲ್ಲ. ನಾನು ಮಹಜರ್ ಗಳಿಗೆ ಪೊಲೀಸ್ ಠಾಣೆಯಲ್ಲಿ ಅವುಗಳನ್ನು ಬರೆದ ನಂತರ ಸಹಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ. ಒನಕೆ ಹಾಗೂ ಹಾರೆ ಆ ಮನೆಯ ಅಟ್ಟದ ಮೇಲೆ ಇದ್ದ ಬಗ್ಗೆ ಆ ಸ್ಥಳದ ಪೊಟೋ ತೆಗೆಯಲಾಗಿಲ್ಲ. ಅದೇ ರೀತಿ ಆ ವಸ್ತುಗಳನ್ನು ಆರೋಪಿ ತಾನೇ ತೆಗೆದುಕೊಡುವ ಬಗ್ಗೆ ಪೊಟೋಗಳನ್ನು ತೆಗೆಯಲಾಗಿಲ್ಲ.

**5.** ಸಾಮಾನ್ಯವಾಗಿ ರೈತರ ಮನೆಯಲ್ಲಿ ಒನಕೆ ಹಾಗೂ ಹಾರೆಗಳು ಇರುತ್ತವೆ ಎನ್ನುವುದು ನಿಜ. ನಾನು ಆ ದಿನ ಆರೋಪಿ ಹಾಗೂ ಪೊಲೀಸರೊಂದಿಗೆ ಆರೋಪಿತನ ಮನೆಗೆಹೋಗಿದ್ದೆ**,** ಅಲ್ಲಿ ಆರೋಪಿ ಒನಕೆ ಹಾಗೂ ಹಾರೆಯನ್ನು ಹಾಜರುಪಡಿಸಿದ ಹಾಗೂ ಪೊಲೀಸರು ಆ ಸ್ಥಳದಲ್ಲೇ ಪಂಚನಾಮೆ ಮಾಡಿದರು ಮತ್ತು ಅದಕ್ಕೆ ನಾನು ಅಲ್ಲಿಯೇ ಸಹಿ ಮಾಡಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆ ಎರಡೂ ಮಹಜರ್ ಗಳಿಗೆ ನಾನು ಠಾಣೆಯಲ್ಲಿಯೇ ಸಹಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ**

ಎಸ್.ಸಿ. ನಂ. 57/2022

ಪಿಡಬ್ಲ್ಯೂ: 13
ಸಿಡಬ್ಲ್ಯೂ: 02

**ದಿನಾಂಕ: 11-06-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು | : ಶ್ರೀಮತಿ ಜಯಶೀಲ |
| ಗಂಡನ ಹೆಸರು | : ಶಿವಮೂರ್ತಿ |
| ವಯಸ್ಸು | : 43 ವರ್ಷ |
| ಉದ್ಯೋಗ | : ಪಿಡಿಓ, ಲಕ್ಷ್ಮೀಸಾಗರ ಗ್ರಾಮ ಪಂಚಾಯಿತಿ, ಚಿತ್ರದುರ್ಗ ತಾಲ್ಲೂಕು |
| ವಾಸ ಸ್ಥಳ | : ಚಿತ್ರದುರ್ಗ |

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರವರಿಂದ:**

ನವೆಂಬರ್ **2023** ರಿಂದ ನಾನು ಲಕ್ಷ್ಮೀಸಾಗರ ಗ್ರಾಮದಲ್ಲಿ ಪಿಡಿಓ ಒಂದು ಸೇವೆ ಸಲ್ಲಿಸುತ್ತಿದ್ದೇನೆ. ಈ ಪ್ರಕರಣವಾಗುವ ಕಾಲಕ್ಕೆ ನಾನು ಆಲಘಟ್ಟ ಗ್ರಾಮದಲ್ಲಿ ಪಿಡಿಓ ಒಂದು ಸೇವೆ ಸಲ್ಲಿಸುತ್ತಿದ್ದೆ. ದಿನಾಂಕ **07–01–2022** ರಂದು ಕೊಲೆ ನಡೆದಿದೆ ಎಂಬ ಕಾರಣಕ್ಕಾಗಿ ಡಿವೈಎಸ್ ಪಿ ರವರು ನನಗೂ ಮತ್ತು ನಮ್ಮ ಕ್ಲರ್ಕ್ ಇವರಿಗೆ ನೋಟಿಸ್ ಕೊಟ್ಟು ಪಂಚನಾಮೆಗೆ ಬರಬೇಕೆಂದು ತಿಳಿಸಿದರು. ಪ್ರಕರಣದ ಪಿರ್ಯಾದುದಾರ ಕರಿಯಪ್ಪ ಇವರ ಮಗಳಾದ ಸುಮ ಇವರನ್ನು ಕೊಲೆ ಮಾಡಿ ರಾಜಪ್ಪ ಬಿನ್ ನಾರಪ್ಪ ಇವರು ವಾಸ ಮಾಡುವ ಮನೆಯಲ್ಲಿ ಹೂತು ಹಾಕಲಾಗಿದೆ ನಮಗೆ ತಿಳಿಸಲಾಯಿತು.

ಈ ಹಂತದಲ್ಲಿ ಮಾನ್ಯ ಪಿಪಿರವರ ಕೋರಿಕೆಯ ಮೇರೆಗೆ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.